ಹೌದು.

ಇ) ಬಸ್ ಡಿಪೋ ಎಷ್ಟು ಸಮಯದಲ್ಲಿ ಮಾಡಲಾಗುವುದು?

ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡನಂತರ ಸಂಸ್ಥೆಯ ಆರ್ಥಿಕ ಪರಿಸ್ಥಿತಿಗನುಗುಣವಾಗಿ ಮುಂದಿನ ಕ್ರಮ ಜರುಗಿಸಲಾಗುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1076(1504)
ಸದಸ್ಯರ ಹೆಸರು : ಶ್ರೀ ಅಂಗಾರ ಎಸ್ (ಸುಳ್ಯ)
ಉತ್ತರಿಸುವ ಸಚಿವರು : ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಸುಳ್ಯ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ಉಪ್ಪನಂಗಡಿ–ಕಡಬ–ಸುಬ್ರಹ್ಮಣ್ಯ ರಸ್ತೆಯು ತೀವ್ರ ಹದಗೆಟ್ಟಿರುವ ಕಾರಣ ಮರು ಡಾಂಬರೀಕರಣ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಹೌದು.

ಆ) ಇದ್ದಲ್ಲಿ, ಎಷ್ಟು ಸಮಯದಲ್ಲಿ ಮರು ಡಾಂಬರೀಕರಣ ಮಾಡಲಾಗುವುದು?

ಈ ರಸ್ತೆಯನ್ನು ಅಭಿವೃದ್ಧಿಪಡಿಸಲು ರೂ.22.5 ಕೋಟಿಗಳ ಅಂದಾಜು ಮೊತ್ತದ ಪ್ರಸ್ತಾವನೆಯು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದಿಂದ ಕೈಗೊಳ್ಳುವ ಬಗ್ಗೆ ಪರಿಶೀಲನೆಯಲ್ಲಿದ್ದು, ಅನುದಾನದ ಲಭ್ಯತೆಗನುಸಾರವಾಗಿ ಕ್ರಮ ಕೈಗೊಳ್ಳಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1077(1474)
ಸದಸ್ಯರ ಹೆಸರು : ಶ್ರೀ ಅಂಜನಾಮೂರ್ತಿ (ನೆಲಮಂಗಲ)
ಉತ್ತರಿಸುವ ಸಚಿವರು : ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ವಿಶ್ವ ಬ್ಯಾಂಕಿನ ನೆರವಿನ ಯೋಜನೆಯಡಿಯಲ್ಲಿ 1149 ಕೋಟಿ ರೂ.ಗಳ ವೆಚ್ಚದಲ್ಲಿ ಪುರಸಭೆ ಯೋಜನೆಯ ಮೂಲಕ ರಾಜ್ಯದ ಪಟ್ಟಣಗಳಲ್ಲಿ ಮೂಲ ಸೌಕರ್ಯಗಳನ್ನು ಕಲ್ಪಿಸಲು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆಯೇ;

ಹೌದು. 1364 ಕೋಟಿ ರೂ. ಗಳ ವೆಚ್ಚದಲ್ಲಿ ಕರ್ನಾಟಕ ಪೌರ ಸುಧಾರಣಾ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ.

ಆ) ಈ ಕಾಮಗಾರಿಗಳಿಗೆ ಬಿಡುಗಡೆಯಾದ ಹಣವೆಷ್ಟು;

ಇಲ್ಲಿಯವರೆಗೆ ಮೂಲಭೂತ ಸೌಕರ್ಯ ಅಭಿವೃದ್ಧಿಗೆ, ಬೆಂಗಳೂರು ಮಹಾ ನಗರ ಪಾಲಿಕೆಗೆ ರೂ 44.12 ಕೋಟಿ ಮತ್ತು ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಗೆ ರೂ 1.00 ಕೋಟಿ ಬಿಡುಗಡೆಯಾಗಿರುತ್ತದೆ.

ಇ) ಈ ಯೋಜನೆಯಲ್ಲಿ ನೆಲಮಂಗಲ ಪಟ್ಟಣವು ಸೇರಿದೆಯೇ;

ಇಲ್ಲ.

ಈ) ಸೇರದಿದ್ದಲ್ಲಿ ಕಾರಣವೇನು?

ಈ ಯೋಜನೆಯಡಿ ಹಣಕಾಸು ಲಭ್ಯತೆಯ ಮಿತಿಯೊಳಗೆ ಹಾಗೂ ನಿಗದಿಪಡಿಸಿದ ಅರ್ಹತಾ ಮಾನದಂಡ ಆಧಾರದ ಮೇಲೆ ಮೂಲ ಸೌಕರ್ಯ ಅಭಿವೃದ್ಧಿಗಾಗಿ ಪಟ್ಟಣಗಳನ್ನು ಆಯ್ಕೆ ಮಾಡಲಾಗಿರುತ್ತದೆ. ಈ ಮಿತಿಯಿಂದಾಚೆ ಹೆಚ್ಚಿನ ಹಣಕಾಸು ಸೌಲಭ್ಯ ಇಲ್ಲದಿರುವುದರಿಂದ, ನೆಲಮಂಗಲ ಪಟ್ಟಣ ಸೇರಿರುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1078(1475)
ಸದಸ್ಯರ ಹೆಸರು : ಶ್ರೀ ಅಂಜನಾಮೂರ್ತಿ (ನೆಲಮಂಗಲ)
ಉತ್ತರಿಸುವ ಸಚಿವರು : ಶ್ರೀ ಎನ್.ಚಲುವರಾಯಸ್ವಾಮಿ (ಸಾರಿಗೆ ಸಚಿವರು.)

ಅ) ಖಾಸಗಿಯವರು ಒಂದೇ ನಂಬರ್‌ನಲ್ಲಿ ಎರಡು-ಮೂರು ಬಸ್ಸುಗಳನ್ನು ಓಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಹೌದು.

ಆ) ಆ ರೀತಿ ಅವ್ಯವಹಾರಕ್ಕೆ ತೊಡಗಿರುವ ವಾಹನಗಳು ಎಷ್ಟು?

ಏಳು ವಾಹನಗಳು.

ಇ) ಈ ವಾಹನಗಳು ಯಾರ ಮಾಲೀಕತ್ವದಲ್ಲಿದೆ?

ಸದರಿ ಏಳು ವಾಹನಗಳು ಈ ಕೆಳಕಂಡವರ ಮಾಲೀಕತ್ವದಲ್ಲಿ ಇರುತ್ತದೆ:-

1. KA-01/A-9117- ಶ್ರೀ ಬಿ.ಎಸ್.ಇಮ್ರಾನ್‌ಖಾನ್ ಬಿನ್ ನೂರುಲ್ಲಾ ಖಾನ್, 186, MK ರಸ್ತೆ, ಶಂಕರಪುರ, ಬೆಂಗಳೂರು.
2. KA-01/B-5454-ಶ್ರೀ ಬಿ.ಜಡ್.ಜಮೀರ್ ಅಹ್ಮದ್‌ಖಾನ್, ನಂ.362, TSP ರಸ್ತೆ, ಕಲಾಸಿಪಾಳ್ಯಂ, ಬೆಂಗಳೂರು-2.